ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಹೆಚ್.ಜೆ. ವಕೀಲರಿಂದಃ-

ನಾನು ಎಸ್.ಎಸ್.ಎಲ್.ಸಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಪ್ರಸ್ತುತ ದಾವೆಯನ್ನು ನನ್ನ 2 ನೇ ಅಣ್ಣ ಮತ್ತು ನಾನು ಸೇರಿ ಮೊದನೇ ಅಣ್ಣನ ಹೆಂಡತಿಯ ಮಕ್ಕಳ ವಿರುದ್ಧ ಮಾಡಿರುತ್ತೇನೆ. ನಾನು 30 ವರ್ಷಗಳಿಂದ ಬೆಂಗಳೂರಿನ ಕೆಂಗೇರಿ ಉಪನಗರದಲ್ಲಿ ವಾಸವಿರುತ್ತೇನೆ. ನಮ್ಮ ಮನೆಯಲ್ಲಿ ನಾನು, ನನ್ನ ಹೆಂಡತಿ ಮತ್ತು ಮಕ್ಕಳು ವಾಸವಿರುತ್ತೇವೆ. ನಾವು ಈಗ ವಾಸಮಾಡುತ್ತಿರುವ ಮನೆ ಸ್ವಂತದ್ದಾಗಿರುತ್ತದೆ. ಸದರಿ ಮನೆಯನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. 1 ನೇ ವಾದಿರವರು ಬಿಡದಿಯಲ್ಲಿ ವಾಸವಾಗಿರುತ್ತಾರೆ. 1 ನೇ ವಾದಿ ತೀರಿಕೊಂಡ ನಂತರ ಅವರ ವಾರಸುದಾರರು ಸಹ ಬಿಡದಿಯಲ್ಲೇ ವಾಸವಿರುತ್ತಾರೆ ಎಂದರೆ ದೊಡ್ಡ ಮಗ ಕರೇನಹಳ್ಳಿಯಲ್ಲಿ ವಾಸವಿರುತ್ತಾರೆ ಉಳಿದವರು ಬಿಡದಿಯಲ್ಲಿ ವಾಸವಿರುತ್ತಾರೆ ಎಂದು ನುಡಿಯುತ್ತಾರೆ. ವಾದಿ 1(ಎ)ರವರು ಮದ್ದಾಪುರ ಕರೇನಹಳ್ಳಿಯಲ್ಲಿ ಸುಮಾರು 25 ವರ್ಷಗಳಿಂದ ಪ್ರತ್ಯೇಕವಾಗಿ ವಾಸವಿರುತ್ತಾರೆ. ನಾನು ಈ ಹಿಂದೆ ಗ್ರಾಮ ಲೆಕ್ಕಿಗನಾಗಿ ನಂತರ ಪಂಚಾಯಿತಿ ಸೆಕ್ರೆಟರಿಯಾಗಿ ನಿವೃತ್ತಿ ಹೊಂದಿರುತ್ತಾರೆ. 1 ನೇ ವಾದಿರವರು ಕೆ.ಇ.ಬಿಯಲ್ಲಿ ಗುಮಾಸ್ತನಾಗಿ ಕೆಲಸ ಮಾಡಿಕೊಂಡಿರುತ್ತಾರೆ. 1 ನೇ ವಾದಿಗೆ ಬಿಡದಿಯಲ್ಲಿ ಸ್ವಂತ ಮನೆ ಸೈಟುಗಳು ಇರುತ್ತವೆ ಎಂದರೆ. ಸದರಿ ಮನೆ ಮತ್ತು ಸೈಟುಗಳನ್ನು ಪ್ರಸ್ತುತ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ.

ನನಗೆ ಒಬ್ಬ ಮಗ ಕಿರಣ್ ಎನ್ನುವರು ಇರುತ್ತಾರೆ ಎಂದರೆ ಸರಿ.

ನನ್ನ ಮಗನಾದ ಕಿರಣ್ ರವರ ಹೆಸರಿನಲ್ಲಿ ಆಸ್ತಿಗಳು ಇರುತ್ತವೆ ಎಂದರೆ ಸರಿ. ಕಿರಣ್ ರವರ ಹೆಸರಿನಲ್ಲಿ ಮಾಗಡಿ ತಾಲ್ಲೂಕು ಮಾಡಬಾಲ್ ಗ್ರಾಮದಲ್ಲಿ ಸರ್ವೇ ನಂಬರ್ 111/7 ರಲ್ಲಿ ಒಟ್ಟು 2 ಎಕರೆ ಜಮೀನು ಅವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಸದರಿ ಸ್ವತ್ತನ್ನು ಸಹ ಪ್ರಸ್ತುತ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ.

ನನಗೆ ಕಂದಾಯ ದಾಖಲೆಗಳ ಬಗ್ಗೆ ತುಂಬಾ ಅನುಭವ ಇದೆ ಎಂದರೆ ಸರಿ. ಪ್ರಸ್ತುತ ದಾವೆಯನ್ನು ನಮಗೆ ಸಮವಾಗಿ ಭಾಗ ಕೊಡದೆ ಮೋಸ ಆಗಿರುತ್ತದೆ ಎಂದು ಮಾಡಿರುತ್ತೇವೆ. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ತಯಾರಿಸಲು ಮತ್ತು ದಾವೆಯನ್ನು ಮಾಡಲು ನಾನು ಮತ್ತು ನನ್ನ ಅಣ್ಣ ಸೇರಿ ವಕೀಲರಿಗೆ ನೀಡಿರುತ್ತೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸುವ ಪೂರ್ವದಲ್ಲಿ 1 ನೇ ವಾದಿ ತೀರಿಕೊಂಡಿದ್ದರು ಎಂದರೆ ಸರಿ. ವಾದಿಗಳು ಮತ್ತು ಪ್ರತಿವಾದಿಗಳು ಈಗಲೂ ಒಟ್ಟಾಗಿ ಒಟ್ಟು ಕುಟುಂಬದಲ್ಲಿ ಇದ್ದು ಜಂಟಿ ಸ್ವಾಧೀನದಲ್ಲಿ ಇದ್ದೇವೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ.

ನಮ್ಮ ತಂದೆಗೆ 3 ಜನ ಗಂಡು ಮಕ್ಕಳು. ನಾವು 3 ಜನ ಸಹೋದರರು ಇದುವರೆವಿಗೂ ಭಾಗ ಮಾಡಿಕೊಂಡಿರುವುದಿಲ್ಲ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳನ್ನು ನೋಡಿ ತಿಳಿದುಕೊಂಡಿರುತ್ತೇನೆ. ನಿಪಿ-5 ರ 2 ನೇ ಪುಟದ ಪ್ರಕಾರ ನನಗೆ 16 ವರೆ ಗುಂಟೆ ಜಮೀನು ಭಾಗದಲ್ಲಿ ಬಂದಿರುತ್ತದೆ ಎಂದರೆ ಸರಿ. ನಿಪಿ-12 ಮತ್ತು 13 ರ ಪ್ರಕಾರ ಐಟಂ-6 ರ ಸ್ವತ್ತಿನಲ್ಲಿ ನನಗೆ 1 ಎಕರೆ 20 ಮತ್ತು 1 ನೇ ವಾದಿಗೆ 1 ಎಕರೆ 20 ಗುಂಟೆ ಜಮೀನು ಭಾಗದಲ್ಲಿ

ಬಂದಿರುತ್ತದೆ ಎಂದರೆ ಸರಿ. ಅದೇ ರೀತಿ ಚಿಕ್ಕಣ್ಣನವರಿಗೆ 2 ಎಕರೆ ಜಮೀನು ಭಾಗದಲ್ಲಿ ಬಂದಿರುತ್ತದೆ ಎಂದರೆ ಸರಿ. ನನಗೆ ಭಾಗಕ್ಕೆ ಬಂದಿರುವ ಸ್ವತ್ತಿನ ಬಗ್ಗೆ ಮ್ಯೂಟೇಷನ್ ಮತ್ತು ಪಹಣಿ ಪತ್ರಿಕೆಗಳು ಬಂದಿರುತ್ತವೆ ಎಂದರೆ ಸರಿ.

ನನ್ನ ಅಣ್ಣ ಚಿಕ್ಕಣ್ಣನವರು ಜೀವಂತ ಇದ್ದಾಗಿನಿಂದಲೂ 1 ರಿಂದ 4 ನೇ ಪ್ರತಿವಾದಿಗಳ ಜೊತೆಯಲ್ಲೇ ವಾಸವಿದ್ದರು ಎಂದರೆ ಸರಿ. 1 ನೇ ವಾದಿಯ ಭಾಗಕ್ಕೆ ಬಂದ ಸ್ವತ್ತನ್ನು 1 ನೇ ವಾದಿ ಮತ್ತು ಅವರ ವಾರಸುದಾರರು ಸೇರಿ ದಿನಾಂಕ 26.11.2013 ರಲ್ಲಿ ವಿಜಯ ಬ್ಯಾಂಕ್ ನೌಕರರ ಗೃಹ ನಿರ್ಮಾಣ ಸಂಘಕ್ಕೆ ನೋಂದಾಯಿ ಸ್ವಾಧೀನ ರಹಿತ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ ಕಾರಣ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.